ಬಹುಮಾನ್ಯವಾಗುತ್ತಿತ್ತು. ಇಂದು ನನ್ನ ಹಣೆಯಲ್ಲಿ ಸೀಲಾಗಿರುವ ISI ಮಾರ್ಕ್‌ಗೆ ಇಂದು ಮಾರ್ಕೆಟ್ ಇಲ್ಲ. ಈ ಗೊಂದಲದಿಂದಲೇ ಯಾವುದೇ ಕತೆಯನ್ನೂ ಕಟ್ಟಲು ಸಾಧ್ಯವಾಗುತ್ತಿಲ್ಲ.

'ಟ್ರಿಪಲ್ ತಲಾಕ್' ಇದೀಗ ಒಂದು ಆಕರ್ಷಕ ಸಂಗತಿ. ಒಳ್ಳೆಯ 'ಟಿ.ಆರ್.ಪಿ.'ಯೂ ಉಂಟು. ಆದರೆ, ಕತೆ ಬರೆಯಲು ಹೊರಟರೆ 'ಕುರಾನ್' ಆದೇಶಗಳು ಅಡ್ಡ ಬರುತ್ತವೆ. 'ಕುರಾನ್' ಪ್ರತಿಯೊಂದನ್ನು ಭಾರತದ ಮಾತ್ರವಲ್ಲ ಜಗತ್ತಿನ ಯಾವುದೇ ನ್ಯಾಯಾಲಯದ ನ್ಯಾಯಾಧೀಶರ ಎದುರು ಇಟ್ಟರೂ ಸಾಕು, ಎರಡೇ ನಿಮಿಷಗಳಲ್ಲಿ, 'ಕುರಾನ್'ನಲ್ಲಿ ಟ್ರಿಪಲ್ ತಲಾಕಿಗೆ ಮಾನ್ಯತೆ ಇಲ್ಲದಿರುವುದರಿಂದ ನ್ಯಾಯಾಲಯವು ಸದರಿ ತಲಾಕನ್ನು ಅಸಿಂಧು ಎಂದು ಘೋಷಿಸುತ್ತದೆ' ಎಂದೇ ತೀರ್ಪು ಕೊಟ್ಟು ಸಮಸ್ಯೆಯನ್ನು ಸುಖಾಂತ್ಯ ಮಾಡಿಬಿಡುತ್ತಾರೆ. ದುಃಖಾಂತ್ಯವುಳ್ಳ ಸೃಜನಶೀಲ ಕೃತಿಗಳನ್ನೇ ನೆಚ್ಚಿಕೊಂಡು ಅಭ್ಯಾಸವಾಗಿರುವ ಓದುಗರು, ಸುಲಭದಲ್ಲಿ ಸುಖಾಂತ್ಯವಾಗುವ 'ಟ್ರಿಪಲ್ ತಲಾಕ್' ಕತೆಯನ್ನು ಇಷ್ಟಪಡುತ್ತಾರೆಯೆ? ನನ್ನ ಕತೆಗಳನ್ನು ಓದುಗರು, ವಿಮರ್ಶಕರು ಇಷ್ಟಪಡಲೇಬೇಕು ಎಂಬ 'ದುರಾಸೆ' ನನ್ನದು.

ತಮಾಷೆಯೆಂದರೆ, ಈ ಸಾಲುಗಳನ್ನು ಬರೆಯುತ್ತಿದ್ದಂತೆ, 'ದೇಶದ ಎಲ್ಲ ಮುಸ್ಲಿಮ್ ಹೆಣ್ಣುಗಳ ಬದುಕನ್ನು ನಿತ್ಯ ಕಾಡುತ್ತಿರುವ ಏಕೈಕ ಸಮಸ್ಯೆಯಾಗಿರುವ 'ಟ್ರಿಪಲ್ ತಲಾಕ್' ಎಂಬ ಮಹಾ ಪಿಡುಗನ್ನು ನಿಭಾಯಿಸಲು ಸಂವಿಧಾನ ಪೀಠಕ್ಕೆ ವರ್ಗಾಯಿಸಲಾಗಿದೆ ಎಂಬ 'ಇದೀಗ ಬಂದ ಸುದ್ದಿ' ಟೀವಿಯಲ್ಲಿ ಸ್ಕ್ರೋಲ್ ಆಗುತ್ತಿತ್ತು. ನಗು ಬಂತು; ನಕ್ಕೆ. ಆ ಪೀಠದ ಸದಸ್ಯರಿಗೆಲ್ಲ ಕುರಾನಿನ ಒಂದೊಂದು ಪ್ರತಿಯನ್ನು ಯಾರಾದರೂ (ನನ್ನಲ್ಲಿ ಎರಡೇ ಪ್ರತಿಗಳಿರುವುದು) ಕಳುಹಿಸಿಕೊಟ್ಟರೆ, ಸಂವಿಧಾನ ಪೀಠದ ಬಹುಮಾನ್ಯ ಸದಸ್ಯರ ಅಮೂಲ್ಯ ಸಮಯವು ವ್ಯರ್ಥವಾಗುವುದನ್ನೂ, ಇನ್ನೆರಡು ತಿಂಗಳ ಕಾಲ ಟೀವಿಯವರು ಟಿ.ಆರ್.ಪಿ.ಗಾಗಿ ಅದನ್ನೇ 24x7 ತಾಸು ಹಿಂಜಿ, ಹಿಂಜಿ ಎಂಜಾಯ್ ಮಾಡುವುದನ್ನೂ ತಡೆಯಬಹುದಾಗಿತ್ತು.

ಕಳೆದ ಇಪ್ಪತ್ತೆರಡು ವರ್ಷಗಳಿಂದ ನನ್ನಿಂದ ಒಂದು ಕತೆಯನ್ನೂ ಬರೆಯಲಾಗಲಿಲ್ಲ. ನನ್ನ ಕೊನೆಯ ಕತೆ 1995ರಲ್ಲಿ ಪ್ರಕಟವಾದ 'ಸ್ವಾತಂತ್ರ್ಯದ ಓಟ' ಎಂಬ ಮೂವತ್ತು ಪುಟಗಳ ನೀಳ್ಗತೆ. ಆ ಬಳಿಕ ಬೇರಾವ ಕತೆಯನ್ನು ಬರೆಯಲಾರಂಭಿಸಿದರೂ, 'ಓಟ' ಕತೆಯ ಕೊನೆಯ ಸಾಲುಗಳಲ್ಲಿ ದೆಹಲಿಯ ರೈಲ್ವೇ ನಿಲ್ದಾಣದಲ್ಲಿ ದಿಕ್ಕುಗೆಟ್ಟು ನಿಂತುಬಿಟ್ಟಿದ್ದ ಪಾಕಿಸ್ತಾನ ಮೂಲದ ಚಾಂದ್ ಅಲೀ, ತನ್ನನ್ನು ಮಾತೃಭೂಮಿಗೆ ಮರಳಿ ಕಳುಹಿಸುವಂತೆ ಒತ್ತಾಯಿಸುತ್ತಿದ್ದ. ಆದರೆ, ದೇಶವಿಭಜನೆಯ ಆ ಭಯಾನಕ ದಿನಗಳಲ್ಲಿ, ಅವನ 'ಐಡೆಂಟಿಟಿ'ಯನ್ನು ಅಂದರೆ, ಅವನೊಬ್ಬ 'ಮುಸ್ಲಿಮ್' ಎಂಬುದನ್ನು ಬಹಿರಂಗಪಡಿಸದೆ, ಭಾರತೀಯ ಅಧಿಕಾರಿಗಳು ಅವನನ್ನು ಪಾಕಿಸ್ತಾನಕ್ಕೆ ಒಪ್ಪಿಸುವ ಸಾಧ್ಯತೆಗಳಿರಲಿಲ್ಲ. ಹಾಗೆಂದು ಬಹಿರಂಗಪಡಿಸಿದರೆ ಅವನ ಪ್ರಾಣಕ್ಕೆ ಅಪಾಯದ ಭಯವೂ ಇತ್ತು. ಅವನದೇ ಮಾತಿನಂತೆ, ಅವನನ್ನು ಮಾತೃಭೂಮಿಗೆ ತಲುಪಿಸಲು ನೆರವಾಗಬಲ್ಲ, ಏಕೈಕ ಮಿತ್ರನೆಂದರೆ, ಅದೇ ದಿನಗಳಲ್ಲಿ ಅಧಿಕೃತವಾಗಿಯೇ ಹಿಂದೂಸ್ತಾನಕ್ಕೆ ಬಂದದ್ದು ಮಾತ್ರವಲ್ಲ ಹಿಂದೂಸ್ತಾನವನ್ನೇ ತನ್ನ ಮಾತೃಭೂಮಿಯೆಂಬುದಾಗಿ ಗರ್ವದಿಂದ ಘೋಷಿಸಬಲ್ಲ, ಕರಾಚಿಯ ಬಾಲ್ಯದ ಗೆಳೆಯ ಲಾಲ್ ಚಂದ್ ಯಾನೆ ಲಾಲ್‌ಕೃಷ್ಣ ಅಡ್ವಾಣಿ ಮಾತ್ರ. ಅಲೀಯ ಹುಡುಕಾಟದ ಕತೆ ಕೊನೆಗೊಂಡದ್ದು ಆರುನೂರು ಪುಟಗಳ ಬಳಿಕ ಬೆಂಗಳೂರಿನ ಕಾರಾಗೃಹದಲ್ಲಿ; 1977ರ ತುರ್ತುಪರಿಸ್ಥಿತಿಯ ದಿನಗಳಲ್ಲಿ. ಆದರೆ ಕಾದಂಬರಿ ಅಲ್ಲೇ ನಿಲ್ಲದೆ ಸಾವಿರ ಪುಟಗಳನ್ನೂ ದಾಟಿಬಿಟ್ಟಿತು.

ಈ ನಡುವಿನ ಕಾಲದಲ್ಲಿ ನಾನೆರಡು ಕಾದಂಬರಿಗಳನ್ನು ಬರೆದಿದ್ದೆ. ಅವುಗಳನ್ನು ಬರೆಯಲು